
# ದಶಕಗಳಿಂದ ರೈತರು ಕೇಳುತ್ತಿದ್ದ ಕೆಲವು ಕಾರ್ಯಕ್ರಮಗಳನ್ನು ಜಾರಿ ಮಾಡಲು ಹಿಂದೆ ಎಂದೂ ಇಲ್ಲದಿದ್ದ ಒಂದು ಸದವಕಾಶ

- ರೈತಸಂಘ ತನ್ನ ಹೋರಾಟದ ಜೊತೆಗೆ ಸರ್ಕಾರದ ಜೊತೆಗೆ ಕೆಲಸ ಮಾಡಲೂ ಮುಂದೆ ಬಂದಿದೆ.
- ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿ ಮಾಡಲು ಉತ್ಸಾಹ ಇರುವ ಸರ್ಕಾರವಿದೆ.
- ಸರ್ಕಾರವು ಈಗಾಗಲೇ ಬಜೆಟ್ ವ್ಯವಸ್ಥೆ ಮಾಡಿರುವ ಹಣದಿಂದಲೇ ಜಾರಿ ಮಾಡಬಹುದಾದ 7 ಮಹತ್ವದ ಕಾರ್ಯಕ್ರಮಗಳು

# ಬೊಕ್ಕಸಕ್ಕೆ ಹೆಚ್ಚುವರಿ ಹೊರೆ ಇಲ್ಲ...

- ಸರ್ಕಾರ ಹೊಸದಾಗಿ ಯಾವ ಹಣವನ್ನೂ ಖರ್ಚು ಮಾಡಬೇಕಿಲ್ಲ.
- ಎಲ್ಲವೂ ಪ್ರಾಯೋಗಿಕವಾಗಿ ಸಾಧ್ಯ.
- ಕೆಲವನ್ನು ಇಂದೇ ಮಾಡಬಹುದು. ಕೆಲವನ್ನು ಇನ್ನೊಂದು ತಿಂಗಳಲ್ಲಿ ಜಾರಿ ಮಾಡಬಹುದು.
- ಮಿಕ್ಕವನ್ನು ಬೊಕ್ಕಸಕ್ಕೆ ಹೊರೆಯಾಗದಂತೆ ಹಂತ–ಹಂತವಾಗಿ ಜಾರಿ ಮಾಡಬಹುದು
- ತೀರ್ಮಾನ ಮಾತ್ರ ಬೇಗ ಆದರೆ, ಅದರಿಂದ ಬಹುಮುಖಿ ಅನುಕೂಲಗಳಿವೆ.



# ಈ ಕ್ರಮಗಳು……

- ಕೋಟ್ಯಾಂತರ ಜನರ ಆಹಾರದಲ್ಲಿನ ಪೌಷ್ಟಿಕಾಂಶ ಹೆಚ್ಚಿಸಲಿದೆ.
- ಕರ್ನಾಟಕದ ರೈತರ ಸಬಲೀಕರಣ – ಪರಿಸರಕ್ಕೆ ಪೂರಕವಾದ ಕ್ರಮಗಳಿವು.
- ಸ್ಥಳೀಯವಾಗಿ ಉದ್ಯೋಗ ಸೃಷ್ಟಿ
- ಗ್ರಾಮೀಣ ಆರ್ಥಿಕತೆಗೆ ಭರಪೂರ ಉತ್ತೇಜನ ಸಿಗಲಿದೆ
- ಮಹಿಳಾ ರೈತರ ಮೇಲೂ ಕೇಂದ್ರೀಕರಿಸುವ, ಸಮಾನತೆ ಸಾಧಿಸುವ ಕ್ರಮಗಳು
- ಕರ್ನಾಟಕ ಸರ್ಕಾರವು ಇಡೀ ದೇಶಕ್ಕೆ ಮಾದರಿ ನಿರ್ಮಾಣ ಮಾಡಲಿದೆ.



# ಈ ಪ್ರಸ್ತಾಪಗಳನ್ನು ಹೀಗೆ ಕರೆಯಬಹುದು

ಸರ್ಕಾರವು ಈಗ ಎತ್ತಿಟ್ಟಿರುವ 9020 **ಕೋಟಿ ರೂ.ಗಳನ್ನು ಅದೇ ಉದ್ದೇಶಕ್ಕೆ ಪರಿಷ್ಕೃತ ರೂಪದಲ್ಲಿ ಬಳಸಿ**

## ಕೃಷಿ ಕ್ಷೇತ್ರದಲ್ಲಿ ಕೈಗೊಳ್ಳಬಹುದಾದ ಮಹತ್ವದ 'ಕರ್ನಾಟಕ ಮಾದರಿ' ಕ್ರಮಗಳು



**[4.42ಕೋಟಿ ಜನರಿಗೆ 5 ಕೆ.ಜಿ. ಅಕ್ಕಿಯ ಜಾಗದಲ್ಲಿ ನೀಡುತ್ತಿರುವ ಒಟ್ಟು ಹಣ 9020 ಕೋಟಿ ರೂ.** ಈಗ ಹಣ ನೀಡುತ್ತಿರುವುದು ಅಕ್ಕಿ ಸಿಗುವ ತನಕ ಎಂದೇ ಹೇಳಲಾಗಿದೆ.]

# ಈಗ ಈ ಪ್ರಸ್ತಾಪವನ್ನು ಪರಿಶೀಲಿಸೋಣ

| ಅನುಕೂಲ | ಇನ್ನೂ 5 ಕೆಜಿ ಅಕ್ಕಿಯನ್ನೇ ಕೊಡುವುದರಿಂದ | ಕುಟುಂಬಕ್ಕೆ 5 ಕೆ.ಜಿ ರಾಗಿ/ಜೋಳ, 1 ಕೆ.ಜಿ ತೊಗರಿಬೇಳೆ, 1 ಕೆಜಿ ಕಡಲೆಕಾಯಿ ಎಣ್ಣೆ ಕೊಡುವುದರಿಂದ |
|---|---|---|
| ಪೌಷ್ಟಿಕಾಂಶ | ಕಾರ್ಬೋಹೈಡ್ರೇಟ್ ಮಾತ್ರ | ಪ್ರೋಟೀನ್ ಮತ್ತಿತರ ಪೌಷ್ಟಿಕಾಂಶಗಳು |
| ರಾಜ್ಯದ ರೈತರಿಗೆ ಅನುಕೂಲ | ಇಲ್ಲ | ಬಹಳ ಅನುಕೂಲ (ವಿವರಿಸಲಾಗಿದೆ) |
| ಉದ್ಯೋಗ ಸೃಷ್ಟಿ | ಇಲ್ಲ | ಬಹಳ ಅನುಕೂಲ (ವಿವರಿಸಲಾಗಿದೆ) |
| ಗ್ರಾಮೀಣ ಆರ್ಥಿಕತೆಯ ಮೇಲೆ ಪರಿಣಾಮ | ಇಲ್ಲ | ಬಹಳ ಸಕಾರಾತ್ಮಕ ಅನುಕೂಲ |
| ಆರೋಗ್ಯದ ಮೇಲೆ | ನಕಾರಾತ್ಮಕ ಪರಿಣಾಮ | ಸಕಾರಾತ್ಮಕ ಪರಿಣಾಮ |
| ಸರ್ಕಾರಕ್ಕೆ ಆರ್ಥಿಕ ಹೊರೆ | 9000 ಕೋಟಿ ರೂ. | 6,800 ಕೋಟಿ ರೂ |

## ಇದು ಪ್ರಾಯೋಗಿಕವಾಗಿ ಸಾಧ್ಯವೇ?

## ಯಾವ್ಯಾವುದಕ್ಕೆ ಎಷ್ಟೆಷ್ಟು ಹಣ ಖರ್ಚಾಗುತ್ತದೆ?

- 5 ಕೆಜಿ ರಾಗಿ – ಕೆಜಿಗೆ 43.5 ರೂಗಳಂತೆ,
- 5 ಕೆಜಿ ಜೋಳ – ಕೆ.ಜಿಗೆ 37 ರೂ.ಗಳಂತೆ,
- 1 ಕೆ.ಜಿ ತೊಗರಿ ಬೇಳೆ – ಕೆ.ಜಿ.ಗೆ 90 ರೂ.ಗಳಂತೆ,
- ಖಾದ್ಯ ತೈಲ – ಕಡಲೇಕಾಯಿ ಎಣ್ಣೆ, ಕೆ.ಜಿಗೆ 200 ರೂ.ಗಳಂತೆ.

- ಒಟ್ಟು ಅಗತ್ಯವಿರುವುದು 6,800 ಕೋಟಿ ರೂ.ಗಳು/ವರ್ಷಕ್ಕೆ

(ಇಂದಿನ ಉತ್ಪಾದನೆಯ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡಿದೆಯಲ್ಲದೇ, ಖರೀದಿ, ನಿರ್ವಹಣೆ, ಸಂಸ್ಕರಣೆ ಮತ್ತು ವಿತರಣೆಯ ವೆಚ್ಚವನ್ನೂ ಗಮನದಲ್ಲಿರಿಸಿಕೊಳ್ಳಲಾಗಿದೆ)








ಗಣನೀಯ ಪ್ರಮಾಣದಲ್ಲಿ ಕರ್ನಾಟಕದಲ್ಲಿ ಬೆಳೆಯಲಾಗುತ್ತಿರುವ ಐದು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಪಡಿಸಲು ಇದರಿಂದ ಸಾಧ್ಯ ಎಂಬ ಮಹತ್ತರ ಸಂಗತಿಯನ್ನು ನಂತರ ಚರ್ಚಿಸಲಾಗಿದೆ.





# ಬೆಳೆ ಉತ್ಪಾದನೆ ಮತ್ತು ಬೆಳೆ ಪ್ರದೇಶ – ಅಂದಾಜು




| | Current production/ year | Household consumption | Additional requirement for PDS | Any additional area? |
|---|---|---|---|---|
| ರಾಗಿ | 11 lakh tonnes | 5.5 lakh tonnes | 3.3 lakh tonnes (60% of marketed surplus) | Not required |
| ಜೋಳ | 7 lakh tonnes | 3.5 lakh tonnes | 3.3 lakh tonnes (95% of marketed surplus) | Not required |
| ತೊಗರಿ | 11 lakh tonnes | Maybe 20% | 1.6 lakh tonnes (18% of marketed surplus) | Not required |
| ಕಡಲೆಕಾಯಿ ಎಣ್ಣೆ | 4.5 lakh tonnes | ? | 1.3 lakh tonnes of oil - 3.25 lakh tonnes of oilseed (72% of production) | Not required |

## ಪ್ರಸ್ತಾಪ ೨

# ಕರ್ನಾಟಕ ಸಿರಿಧಾನ್ಯಗಳ ಅಭಿಯಾನ








- ಸಿರಿ ಧಾನ್ಯಗಳ ಪುನಶ್ಚೇತನಕ್ಕೆ ಆರಂಭದಿಂದ ಕಡೆಯವರೆಗೆ (ಒರಿಸ್ಸಾದಲ್ಲಿರುವಂತೆ) ಸರ್ಕಾರದ ಮಧ್ಯಪ್ರವೇಶದ ಅಗತ್ಯವಿದೆ.
- ಸ್ಥಳೀಯ ಬೀಜಗಳ ಗುಣಮಟ್ಟ ಹೆಚ್ಚಳ, ಸಂಸ್ಕರಣೆಗೆ ಬೇಕಾದ ಮೂಲಭೂತ ಸೌಕರ್ಯಗಳು ಹಾಗೂ ಇನ್ನಿತರ ಹೂಡಿಕೆಗಳನ್ನು ಮಾಡಬೇಕಾಗುತ್ತದೆ. ಇದಲ್ಲದೇ ಬಳಕೆಯನ್ನು ಹೆಚ್ಚಿಸಲು ಜಾಗೃತಿ ಮೂಡಿಸುವ ಪ್ರಚಾರವನ್ನು ಮಾಡಬೇಕು. ಇವೆಲ್ಲವನ್ನೂ ಒಂದು ಅಭಿಯಾನದ ರೀತಿಯಲ್ಲಿ ಕೈಗೊಳ್ಳಬೇಕು.
- ಅಗತ್ಯವಿರುವ ಬಜೆಟ್ 100 ಕೋಟಿಗಳು ಮಾತ್ರ.

## ಪ್ರಸ್ತಾಪ 3

## ಸಾಂಪ್ರದಾಯಿಕ ಬೀಜ ವೈವಿಧ್ಯತೆಯ ಪುನಶ್ಚೇತನ – ಸಂರಕ್ಷಣೆ, ಬೀಜೋತ್ಪಾದನೆ ಮತ್ತು ವಿತರಣೆ ಕರ್ನಾಟಕದ 20 ಬೀಜ ಸಂರಕ್ಷಕರಿಗೆ ಪ್ರೋತ್ಸಾಹ ಕೊಡುವ ಮೂಲಕ ಆರಂಭ

- ಜೀವ ವೈವಿಧ್ಯತೆಯ ಪುನಶ್ಚೇತನವು ಮಣ್ಣಿನ ಆರೋಗ್ಯ, ಸಸ್ಯಗಳ ಪೌಷ್ಟಿಕತೆ ಮತ್ತು ಮನುಷ್ಯರ ಆಹಾರದಲ್ಲಿ ಪೌಷ್ಟಿಕತೆ ಹೆಚ್ಚಿಸಲು ಬಹುಮುಖ್ಯವಾದುದು – ಹವಾಮಾನಕ್ಕೆ ಒಗ್ಗಿಕೊಳ್ಳುವ, ಹವಾಮಾನವನ್ನು ರಕ್ಷಿಸುವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲೂ ಇದರ ಅಗತ್ಯವಿದೆ
- ಕೃಷಿಯ ಮೇಲೆ ದೊಡ್ಡ ದೊಡ್ಡ ಕಂಪೆನಿಗಳ ಹಿಡಿತವನ್ನು ತಪ್ಪಿಸಿ, ಸಮುದಾಯಗಳಿಗೆ ಬೀಜ ಸಾರ್ವಭೌಮತೆ ಉಳಿದುಕೊಳ್ಳುವುದು ಮುಖ್ಯವಾದುದು
- ಕರ್ನಾಟಕದಲ್ಲಿ ಅತ್ಯಾಸಕ್ತಿಯಿಂದ ಬೀಜ ಸಂರಕ್ಷಣೆಯಲ್ಲಿ ತೊಡಗಿರುವವರಿಗೆ ಸರ್ಕಾರದಿಂದ ಮಾನ್ಯತೆ ಮತ್ತು ಬೆಂಬಲ ದೊರೆಯಬೇಕು – ಆರಂಭದಲ್ಲಿ ಅಂತಹ 20 ಬೀಜ ಸಂರಕ್ಷಕರಿಗೆ ಪ್ರೋತ್ಸಾಹ
- ಸಾಂಪ್ರದಾಯಿಕ ಬೀಜಗಳನ್ನು ಸರ್ಕಾರವು ತನ್ನ ಸಾರ್ವಜನಿಕ ಬೀಜ ವಿತರಣಾ ವ್ಯವಸ್ಥೆಯಿಂದ ವಿತರಿಸಬೇಕು.
- ಇದಕ್ಕೆ ಅಗತ್ಯವಿರುವ ಬಜೆಟ್ ಸುಮಾರು 5 ಕೋಟಿ ರೂ.ಗಳು.



## ಪ್ರಸ್ತಾಪ 4

## 'ನೇರವಾಗಿ ಗ್ರಾಹಕರಿಗೆ' ತಲುಪಿಸುವ ಸಾವಯವ ಮಾರುಕಟ್ಟೆಗಳ ವ್ಯವಸ್ಥೆ. D2C

- ಪರಿಸರ ಪೂರಕ ಕೃಷಿ ಪದ್ಧತಿಯ ಕಡೆಗೆ ಸಾಗುವ ಬೆಳೆ ಪದ್ಧತಿಗೆ ದೊಡ್ಡ ಮಟ್ಟದ ಪ್ರೋತ್ಸಾಹ ನೀಡುವುದು
- ಎಲ್ಲಾ ವರ್ಗಗಳ ಗ್ರಾಹಕರಿಗೂ ದೃಢೀಕೃತ ಸಾವಯವ ಕೃಷಿ ಉತ್ಪನ್ನಗಳು ಸಿಗುವಂತೆ ನೋಡಿಕೊಳ್ಳುವುದು.
- ಗ್ರಾಹಕರಿಗೆ ನೇರವಾಗಿ ತಲುಪಿಸುವುದರ ಮೂಲಕ ಸಾವಯವ ಕೃಷಿಕರಿಗೆ ಗರಿಷ್ಠ ಅನುಕೂಲ ಸಿಗುವಂತೆ ನೋಡಿಕೊಳ್ಳಬೇಕು. ಜೊತೆಗೆ ಗ್ರಾಮೀಣ ಯುವಜನತೆ ಮತ್ತು ಮಹಿಳಾ ಕೂಟಗಳಿಗೆ ಮೌಲ್ಯವರ್ಧನೆಯಿಂದ (ಸ್ಥಳೀಯವಾಗಿ ಸಂಸ್ಕರಿಸುವ ಪುಟ್ಟ ಉದ್ದಿಮೆಗಳಿಂದ) ಗರಿಷ್ಠ ಅನುಕೂಲ ಸಿಗುವ ಸಾಧ್ಯತೆ ಇದೆ.
- ಹೆದ್ದಾರಿ ಆರ್ಗ್ಯಾನಿಕ್ ಹಬ್ ಗಳು, ನಗರ ಆರ್ಗ್ಯಾನಿಕ್ ರೈತರ ಮಾರುಕಟ್ಟೆಗಳು ಇತ್ಯಾದಿಗಳನ್ನು ಸ್ಥಾಪಿಸಬಹುದು.
- **ಬಜೆಟ್ ಅಗತ್ಯ: ಮೊದಲ 25 ಪೈಲಟ್ ಕಾರ್ಯಕ್ರಮಗಳಿಗೆ 25 ಕೋಟಿ ರೂ.ಗಳು**






## ಪ್ರಸ್ತಾಪ 5

# ಎಫ್‌ಪಿಓಗಳಿಗೆ ಬಡ್ಡಿ ಪಾವತಿಸಲು ಬೆಂಬಲ ಮತ್ತು ಸಾಲದ ಖಾತರಿ ನಿಧಿ

- ಎಫ್‌ಪಿಓಗಳಿಗೆ ಸಬ್ಸಿಡಿ ನೀಡಿ, ಮಾರುಕಟ್ಟೆಯಲ್ಲಿ ಸ್ಟಾರ್ಟಪ್‌ಗಳಾಗಿ ಲಾಭ ಗಳಿಸುವಂತೆ ಮಾಡುವುದು
- ಭಾರತ ಸರ್ಕಾರದ 10,000 ಎಫ್‌ಪಿಓಗಳ ಭಾಗವಾಗಿಲ್ಲದ ಕಂಪೆನಿಗಳ ಮೇಲೆ ಕೇಂದ್ರೀಕರಿಸಿ ಬೆಂಬಲಿಸುವುದು.
- ಎಫ್‌ಪಿಓಗಳಿಗೆ ಮೂರು ವರ್ಷಗಳ ಕಾಲ ಬಡ್ಡಿ ಹೊರೆ ಇಲ್ಲದ ಹಾಗೆ ಮಾಡುವುದು, ನಿರ್ದಿಷ್ಟ ಮಿತಿಯೊಳಗೆ ಸಾಲದ ಖಾತರಿ ಮಾಡಲು ನಿಧಿ ಸ್ಥಾಪಿಸುವುದು. ಈ ಸದ್ಯ ತಲಾ 5 ಕೋಟಿಯಂತೆ 600 ಎಫ್‌ಪಿಓಗಳಿಗೆ 3000 ಕೋಟಿ ರೂ.ಗಳ ಬ್ಯಾಂಕ್ ಸಾಲ. ಇದರಲ್ಲಿ 3% ಬಡ್ಡಿಯ ಹೊರೆಯನ್ನು ಸರ್ಕಾರ ಹೊತ್ತುಕೊಳ್ಳುವುದು.
- ಸಾಲದ ಖಾತರಿ ನಿಧಿಯು ಸಾಲ ನೀಡಿಕೆ ಸಂಸ್ಥೆಗಳ ವತಿಯಿಂದ ಪ್ರಕ್ರಿಯೆ ಸರಾಗಗೊಳಿಸುವುದು.
- ಬಜೆಟ್ ಅಗತ್ಯ: ಬಡ್ಡಿ ಹೊರೆ ನಿರ್ವಹಣೆಗೆ 90 ಕೋಟಿ ರೂ.ಗಳು. ಮತ್ತು ಸಾಲ ಖಾತರಿ ನಿಧಿ ನಿರ್ವಹಣೆಗೆ 25 ಕೋಟಿ ರೂ.ಗಳು – ಒಟ್ಟು 115 ಕೋಟಿ ರೂ.ಗಳು



**ಪ್ರಸ್ತಾಪ 6**

**ರೈತ ಆತ್ಮಹತ್ಯೆಯಿಂದ ಸಂಕಷ್ಟಕ್ಕೀಡಾದ ಕುಟುಂಬಗಳ ಮಹಿಳಾ ರೈತರಿಗೆ ನೆರವು – ಒಂದು ಸಾರಿ ಸಾಲದ ನಿವಾರಣೆ**

- **5000 ಮಹಿಳೆಯರಿಗೆ ಈ ನೆರವು ನೀಡುವುದು (2018ರ ನಂತರ ಆತ್ಮಹತ್ಯೆಗಳು ಆದ ಕುಟುಂಬಗಳು)**
- **ಸರ್ಕಾರವು ಎಲ್ಲಾ ಜಿಲ್ಲೆಗಳಲ್ಲಿ ಆತ್ಮಹತ್ಯೆಗೆ ಬಲಿಯಾದ ರೈತರ ಹೆಂಡತಿಯರ ಡೇಟಾಬೇಸ್ ನಿರ್ವಹಿಸುವುದು.**
- **ಆಂಧ್ರ ಮತ್ತು ತೆಲಂಗಾಣಗಳಲ್ಲಿ ಇರುವಂತೆ ತಲಾ 2 ಲಕ್ಷ ರೂ.ಗಳವರೆಗಿನ ಸಾಲವನ್ನು ಒಂದು ಬಾರಿಗೆ ಪಾವತಿಸುವುದು.**
- **ಬಜೆಟ್ ಅಗತ್ಯ 100 ಕೋಟಿ ರೂ.ಗಳು**



# ಪ್ರಸ್ತಾಪ 7: FRUITS portalನಲ್ಲಿ ಮಹಿಳಾ ರೈತರ ನೋಂದಣಿ

(Farmer Registration and Unified beneficiary InformaTion System)


- ಕುಟುಂಬದ ಭೂಮಿಯಲ್ಲಿ ಕೆಲಸ ಮಾಡುವ ಮಹಿಳೆಯರನ್ನು ರೈತರೆಂದು ಪರಿಗಣಿಸುತ್ತಿಲ್ಲ. ಹಾಗಾಗಿ ಅಂಥವರನ್ನು ಮಹಿಳಾ ರೈತರೆಂದು ಗುರುತಿಸಿ ಮಾನ್ಯತೆ ನೀಡುವುದು.
- FRUITS portal ರೇಷನ್ ಕಾರ್ಡಿನ ಮೂಲಕ ಭೂಮಿಯ ಮಾಲೀಕರ ಹೆಂಡತಿಯ ಹೆಸರನ್ನೂ ತೆಗೆದುಕೊಂಡು, ಮಹಿಳೆಯರಿಗೂ FID ನೀಡುವುದು.
- ಇದರಿಂದ ಮಹಿಳಾ ರೈತರೂ ಸಹಾ ಕೃಷಿ ಮಾರುಕಟ್ಟೆಯ ಸೌಲಭ್ಯಗಳನ್ನು ಪಡೆಯುವುದು, ತರಬೇತಿ ಪಡೆಯುವುದು, ಎಫ್ ಪಿ ಓ ಸದಸ್ಯರಾಗುವುದು, ಆದ್ಯತೆ ವಲಯದ ಸಾಲ ನೀಡಿಕೆಗೆ ಸಾಲ ಪಡೆಯುವುದು ಸಾಧ್ಯ.
- ಬಜೆಟ್ ಅಗತ್ಯ – ಶೂನ್ಯ



# ಪ್ರಸ್ತಾಪ 8

## ಅಕ್ಟೋಬರ್ 15ನ್ನು ಮಹಿಳಾ ರೈತರ ದಿನವೆಂದು ಘೋಷಿಸುವುದು

- ಅಗೋಚರ ಕಾರ್ಮಿಕರಾಗಿ ಉಳಿದುಬಿಟ್ಟಿರುವ ಮಹಿಳೆಯರ ಕೊಡುಗೆಯನ್ನು ಮಹಿಳಾ ರೈತರೆಂದು ಗುರುತಿಸುವ ಮೂಲಕ ಸಾಮಾಜಿಕ ಸ್ಥಾನ ಕಲ್ಪಿಸುವುದು.
- ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು, ಮಹಿಳಾ ರೈತರನ್ನು ಸನ್ಮಾನಿಸುವುದೂ ಅದರ ಭಾಗವಾಗಬಹುದು.
- ಬಜೆಟ್ ಅಗತ್ಯ : ಶೂನ್ಯ (ಈಗಲೇ ಇರುವ ಬಜೆಟ್‌ನಲ್ಲೇ ಮಾಡಬಹುದು)



भारत सरकार
कृषि एवं किसान कल्याण मंत्रालय
कृषि, सहकारिता एवं किसान कल्याण विभाग
कृषि भवन, नई दिल्ली-110001

**Jalaj Shrivastava**
**Additional Secretary**
Government of India
Ministry of Agriculture and Farmers Welfare
Department of Agriculture, Cooperation and Farmers Welfare
Krishi Bhawan, New Delhi-110001

**D.O. No. 17(2)/2018-NGRCA Pt-II** **Dated, the 3rd October, 2018**

Dear Sir/Madam,

This is in continuation to our earlier communication of even no. dated 19th September 2018 regarding **Mahila Kisan Diwas,** 2018 to be celebrated on 15.10.2018 in NASC Complex, New Delhi.

2. The celebrations of Mahila Kisan Diwas starts on 14.10.2018, where 03 group of around 100 women from across the country comprising of Academia, Researchers/Scientists, Farmer Organisations, Women Farmers, Women Entrepreneurs, Representatives from Banking Sector, Industry etc. discussing & delving deep into following key thematic areas -

- Issues, constraints and strategies for Farm Women in **Agriculture**
- Issues, constraints and strategies for Farm Women in **Animal Husbandry, Dairying, Fisheries and other off-farm activities**.
- Farm Women's **access to institutional credit and micro-financing** and building agri-enterprises.

3. All 03 groups will then share their recommendations with the other participating women in the presence of Hon'ble Agriculture Minister & Ministers of State (Agriculture) in the forenoon of 15.10.2018.

4. It is also proposed to felicitate 30-40 women farmers from across the country @2 women farmers per State; one from agriculture and other from any of the allied sectors during this celebration on 15.10.2018. The names of women who have been practicing modern agriculture/allied sector technologies and have been doing innovative work in their respective areas with their contribution having been duly recognised may be sent to us after their final selection at the State Level.

5. In context to above, it is therefore requested to-

- Celebrate Mahila Kisan Diwas, 2018 with vigour at State as well as District level and
- Keeping in view your State comparative advantage in Agriculture / Horticulture / Dairy / Fisheries sector, please nominate, accordingly Commissioner / Secretary of concerned Department, as State representative to be part of the said celebration.


I look forward to your response to make this event a success.

With best regards

Yours sincerely

(Jalaj Shrivastava)

**Chief Secretary**
**{All State/UTs}**



ಇಲ್ಲಿಯವರೆಗೆ ಮುಂದಿಟ್ಟ ಎಲ್ಲಾ ಪ್ರಸ್ತಾಪಗಳಿಗೆ ಅಂದಾಜು 6,900 ಕೋಟಿ ರೂ.ಗಳು ಖರ್ಚಾಗುತ್ತವೆ. ಇನ್ನೂ 2100 ಕೋಟಿ ರೂ.ಗಳನ್ನು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಶಾಸನಾತ್ಮಕವಾಗಿ ಕೊಡುವುದಕ್ಕೆ ವಿನಿಯೋಗಿಸಬಹುದು.



ಹೊಸ ಬಜೆಟ್ ಅಗತ್ಯವಿಲ್ಲದೇ ಎಂಎಸ್‌ಪಿ ಕುರಿತ ಮಹತ್ವದ ಕ್ರಮವನ್ನು ಈ ಸರ್ಕಾರ ಮಾಡಬಹುದು.

## ಪ್ರಸ್ತಾಪ 9

# MSP–ಕನಿಷ್ಠ ಬೆಂಬಲ ಬೆಲೆ–ಯನ್ನು ಕರ್ನಾಟಕದಲ್ಲಿ ಕಾಯ್ದೆಯನ್ನಾಗಿ ರೂಪಿಸುವುದು...
## ಆ ಮೂಲಕ ರೈತ ಹೋರಾಟದ ಮಹತ್ವದ ಒತ್ತಾಯವನ್ನು ಜಾರಿಗೆ ತಂದ ಮೊದಲ ರಾಜ್ಯ ಎಂಬ ಗರಿಮೆ



- ರಾಜ್ಯದ ಮತ್ತು ದೇಶದ ರೈತ ಚಳವಳಿಗಳ ಬಹುಕಾಲದ ಒತ್ತಾಯವಿದು.
- ರೈತರ ಆದಾಯವನ್ನು ಹೆಚ್ಚಿಸಲು, ಲಾಭದಾಯಕ ಬೆಲೆಯನ್ನು ಖಾತ್ರಿ ಮಾಡುವುದು ಬಹಳ ದೊಡ್ಡ ಕ್ರಮ – ಇದು ಗ್ರಾಮೀಣ ಆರ್ಥಿಕತೆಯಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಮಾರುಕಟ್ಟೆಯಲ್ಲಿ ರೈತರಿಗೆ ಆಗುವ ಅನ್ಯಾಯವನ್ನು ತಪ್ಪಿಸುತ್ತದೆ.
- ಭಾರತ್ ಜೋಡೋ ಯಾತ್ರೆಯ ನಂತರ ಭಾರತದ ರೈತರಿಗೆ ಕಾಂಗ್ರೆಸ್ ಪಕ್ಷ ನೀಡಿರುವ ವಾಗ್ದಾನವನ್ನು ಈಡೇರಿಸುವಲ್ಲಿ ದೊಡ್ಡ ಹೆಜ್ಜೆ.
- ಕರ್ನಾಟಕ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಕಾಯ್ದೆಯಡಿ ಈಗಾಗಲೇ ಪಟ್ಟಿ ಮಾಡಲಾಗಿರುವ ಬೆಳೆಗಳಿಗೆ ಶಾಸನಾತ್ಮಕವಾಗಿ ಅದನ್ನು ಖಾತ್ರಿ ಮಾಡುವ ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆದುಕೊಳ್ಳುವುದು.



# ಕರ್ನಾಟಕದಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನಾಗಿಸುವುದು

- ಕನಿಷ್ಠ ಬೆಂಬಲ ಬೆಲೆಯನ್ನು ಖಾತ್ರಿಗೊಳಿಸುವುದು ಎಂದರೆ ಸರ್ಕಾರವೇ ಎಲ್ಲಾ ಬೆಳೆಗಳನ್ನು ಕೊಳ್ಳುವುದು ಎಂಬ ತಪ್ಪು ಕಲ್ಪನೆ ಇದೆ. ಅದು ವಾಸ್ತವವಲ್ಲ; ಕಾರ್ಯಸಾಧುವೂ ಅಲ್ಲ.
- ಬೇರೆ ಬೇರೆ ಬೆಳೆಗಳಿಗೆ ಬೇರೆ ಬೇರೆ ರೀತಿಯ ಕ್ರಮಗಳು ಅಗತ್ಯ: ಸರ್ಕಾರದ ಪಡಿತರ ವಿತರಕ ವ್ಯವಸ್ಥೆಗೆ ಬೇಕಾದ ಆಹಾರ ಪದಾರ್ಥಗಳನ್ನು ಕೊಳ್ಳುವುದು, ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ, ಬೆಲೆ ಕೊರತೆ ಪಾವತಿ ಯೋಜನೆ, ಗೋದಾಮು ರಸೀತಿ ಪರಿಷ್ಕೃತ ಯೋಜನೆ, ಎಫ್‌ಪಿಓಗಳ ಮೇಲೆ ಹೂಡಿಕೆ ಇತ್ಯಾದಿ.
- ರಾಗಿ, ಜೋಳ, ತೊಗರಿ ಮತ್ತು ಕಡಲೆಕಾಯಿಗಳ ವಿಚಾರದಲ್ಲಿ ಸರ್ಕಾರವು ಪಡಿತರ ವಿತರಣೆಯಲ್ಲಿ ತರುವ ಮೂಲಕ ಕನಿಷ್ಠ ಬೆಂಬಲ ಬೆಲೆಯಲ್ಲಿ ಕೊಂಡರೆ ಅದರ ಬೆಲೆ ಸ್ಥಿರಗೊಳಿಸುವುದು.
- ಈರುಳ್ಳಿ, ಆಲೂಗಡ್ಡೆ ಮತ್ತು ಟೊಮ್ಯಾಟೋಗಳಿಗೆ ಬೆಲೆ ಕೊರತೆಯನ್ನು ಭರಿಸುವ ವಿಧಾನವನ್ನು ಅಳವಡಿಸಿಕೊಳ್ಳುವುದು.
- ಪರಿಷ್ಕೃತ ಗೋದಾಮು ರಸೀತಿ ಯೋಜನೆಯಲ್ಲಿ ರೈತರು ನಿರ್ದಿಷ್ಟ ಅವಧಿಯ ನಂತರ ಬೆಲೆ ಖಾತರಿ ಪಡೆದುಕೊಳ್ಳುವ ಅನುಕೂಲ ಪಡೆದುಕೊಳ್ಳಬೇಕು.
- ಬಜೆಟ್ ಅಗತ್ಯ: ನಾಲ್ಕು ಬೆಳೆಗಳ ಖರೀದಿಗೆ 6,900 ಕೋಟಿ ರೂ.ಗಳ ವಿವರವನ್ನು ಆಗಲೇ ಕೊಡಲಾಗಿದೆ. ಉಳಿದ ಯೋಜನೆಗಳಿಗೆ 2000 ಕೋಟಿ ರೂ.ಗಳಿಗಿಂತ ಹೆಚ್ಚು ಅಗತ್ಯವಿಲ್ಲ. 3ಕ್ಕಿಂತ ಹೆಚ್ಚು ಇತರ ಬೆಳೆಗಳನ್ನೂ ಈ ವ್ಯಾಪ್ತಿಗೆ ತರಬಹುದು. 100 ಕೋಟಿ ರೂ.ಗಳನ್ನು ಪರಿಷ್ಕೃತ ಗೋದಾಮು ರಸೀತಿ ಯೋಜನೆಯ ಪೈಲಟ್ ಕ್ರಮಗಳಿಗೆ ಸಾಕಾಗುತ್ತದೆ.




**ಹಂತಹಂತವಾಗಿ ಇದನ್ನು ಹೇಗೆ ಕಾರ್ಯಸಾಧುಗೊಳಿಸಬಹುದು ಎಂಬ ಬಗ್ಗೆ ವಿವರವಾದ ಪ್ರಸ್ತಾಪವನ್ನು ನೀಡಲಾಗುವುದು.**

# Overall re-purposing of 9000 crores of DBT

| | |
|---|---|
| Ragi procurement & distribution (processing units will get business, handling will create employment) | 1435.5 crores |
| Jowar procurement &distribution (processing units will get business, handling will create employment) | 1221 crores |
| Tur procurement & distribution (processing units will get business, handling will create employment) | 1440 crores |
| Groundnut oil distribution (procurement, processing and distribution will also involve new cold pressed units being established) | 2700 crores |
| Millets Mission | 0100 crores |
| Seed sovereignty & Traditional Seed Diversity Revival | 0005 crores |
| Organic D2C pilots | 0025 crores |
| FPOs financing support – Interest Subvention + Credit Guarantee Fund | 0115 crores |
| One time debt settlement for women in farm suicide families | 0100 crores |
| MIS and Price Deficiency Payment System for at least 3-5 commodities | 1750 crores |
| Modified Warehouse Receipt Scheme for MSP guarantee to farmers - Pilots | 0125 crores |
| Women Farmers to be given FIDs in FRUITS portal | NIL |
| October 15th to be celebrated as Women Farmers' Day | NIL |
| **Total** | **9016.5 crores** |